**ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**
**ಸಿ.ಸಿ.ನಂ.೯೮/೨೦೧೮**

**ಪಿಡಬ್ಲು ೭**
**ಸಿಡಬ್ಲು ೧೮**

ಹೆಸರು : ರವೀಂದ್ರ ಸುರೇಶ ಪಿಳನಕರ
ವಯಸ್ಸು : ೨೮ ವರ್ಷ
ಉದ್ಯೋಗ : ಫೋಟೋಗ್ರಾಫರ
ವಾಸ : ಜಾಂಬೋಟಿ ಗ್ರಾಮ, ಖಾನಾಪೂರ.

**ದಿನಾಂಕ ೧೩-೧೧-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ **4, 5** ಮತ್ತು **17** ರವರು ಗೊತ್ತು. ನಾನು ಕಳೆದ 8 ವರ್ಷಗಳಿಂದ ಫೋಟೋಗ್ರಾಫರನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 17-10-2017 ರಂದು ಸಂಜೆ 7.00 ಗಂಟೆಗೆ ನನ್ನನ್ನು ಜಾಂಬೋಟಿ ಗ್ರಾಮದ ಖಾನಾಪೂರ ಕ್ರಾಸಗೆ ಕರೆಸಿದ್ದರು. ಆಗ ಪೋಲಿಸರ ವಶದಲ್ಲಿ ಮೂರು ಜನ ಆರೋಪಿತರು, ಒಂದು ಕಾರ ಮತ್ತು ಮಾರುತಿ ವ್ಯಾನ ಇದ್ದವು. ಪೋಲಿಸರು ಕಾರಿನ ಡಿಕ್ಕಿಯನ್ನು ಪರಿಶೀಲಿಸಿದಾಗ, ಅಲ್ಲಿ ಒಂದು ಫಾಸ್ಟ್ಯಾಕ ಕಂಪನಿಯ ಬ್ಯಾಗ ಇದ್ದು, ಅದರಲ್ಲಿ ಎರಡು ಸ್ಕ್ರೂ ಡ್ರೈವರ, ಒಂದು ಕಬ್ಬಿಣದ ಉಳಿ, ಎರಡು ರಾಡ್ ಮತ್ತು ಎರಡು ಪಾನಾ ಇದ್ದವು. ಪೋಲಿಸರು ಅವುಗಳನ್ನು ಜಪ್ತುಪಡಿಸಿಕೊಂಡು ಸ್ಥಳದಲ್ಲಿ ನಿಪಿ-14 ರಂತೆ ಪಂಚನಾಮೆ ತಯಾರಿಸಿದರು. ಸಾಕ್ಷಿಯು ನಿಪಿ-21 ರಲ್ಲಿ ಕಾಣುವ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-17 ಮತ್ತು 18 ರಲ್ಲಿ ಕಾಣುವ ಕಾರಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಸ್ಥಳದಲ್ಲಿ ನಿಪಿ-17 ರಿಂದ 20 ರಂತೆ ಫೋಟೋಗಳನ್ನು ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಸಾಕ್ಷಿಯು ಸದರಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಯಿತು.

ನಂತರ ಪೋಲಿಸರು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ಕಾರಗಳನ್ನು ತೆಗೆದುಕೊಂಡು, ನಮ್ಮನ್ನು ಜಾಂಬೋಟಿ ಹೊರ ಉಪಠಾಣೆಗೆ ಕರೆದುಕೊಂಡು ಹೋದರು. ಪೋಲಿಸರು 1 ಮತ್ತು 2 ನೇ ಆರೋಪಿತರನ್ನು ನನ್ನ ಸಮಕ್ಷಮ ವಿಚಾರಿದಾಗ ಅವರು ತಾವು ಹಲವಾರು ಸ್ಥಳಗಳಲ್ಲಿ ಸದರಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೆವು ಎಂದು ತಿಳಿಸಿದರು. ಅವುಗಳನ್ನು ಮಾರಾಟ ಮಾಡಲು ಬೆಳಗಾವಿಗೆ ಹೋಗುವಾಗ ಪೋಲಿಸರು ಬಂಧಿಸಿದ್ದರು ಎಂದು ನಮಗೆ ತಿಳಿಸಿದ್ದರು. 1 ನೇ ಆರೋಪಿಯು ತಾನು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ ಆಭರಣಗಳನ್ನು ಹಾಜರು ಪಡಿಸುತ್ತೇನೆಂದು ಹೇಳಿ ನನ್ನ ಸಮಕ್ಷಮ ಕಾರಿನ ಚಾಲಕನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ 42 ಆಭರಣಗಳನ್ನು ತೆಗೆದು ಹಾಜರು ಪಡಿಸಿದನು. ಪೋಲಿಸರು ಸ್ಥಳದಲ್ಲಿ ನಿಪಿ-15 ರಂತೆ

ಪಂಚನಾಮೆ ತಯಾರಿಸಿ, ಅವುಗಳನ್ನು ತೆಗೆದುಕೊಂಡರು. ನಾನು ಸ್ಥಳದಲ್ಲಿ ನಿಪಿ-22 ಮತ್ತು 23 ರಂತೆ ಫೋಟೊ ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಸಾಕ್ಷಿಯು ಸದರಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-30 ಎಂದು ಗುರುತಿಸಲಾಯಿತು.

ನಂತರ ಸದರಿ ಉಪಠಾಣೆಯಲ್ಲಿ 2 ನೇ ಆರೋಪಿಯು ನನ್ನ ಸಮಕ್ಷಮ ಕಾರಿನ ಚಾಲಕನ ಹಿಂದಿನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ ಹಲವಾರು ಆಭರಣಗಳನ್ನು ತೆಗೆದು ಹಾಜರು ಪಡಿಸಿದನು . ಪೋಲಿಸರು ಸ್ಥಳದಲ್ಲಿ ನಿಪಿ-16 ರಂತೆ ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದರು. ನಾನು ಸ್ಥಳದಲ್ಲಿ ನಿಪಿ-24 ಮತ್ತು 25 ರಂತೆ ಫೋಟೊ ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಸಾಕ್ಷಿಯು ಸದರಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-31 ಎಂದು ಗುರುತಿಸಲಾಯಿತು.

ನಂತರ ಸದರಿ ಉಪಠಾಣೆಯಲ್ಲಿ ಇನ್ನೊಬ್ಬ ಆರೋಪಿಯು ನನ್ನ ಸಮಕ್ಷಮ ಮಾರುತಿ ವ್ಯಾನನಲ್ಲಿದ್ದ ಒಂದು ಬಂಗಾರದ ಗಂಟನ ಮತ್ತು ಬೆಳ್ಳಿಯ ಕಾಲು ಚೈನುಗಳನ್ನು ತೆಗೆದು ಹಾಜರು ಪಡಿಸಿದನು . ಪೋಲಿಸರು ಸ್ಥಳದಲ್ಲಿ ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದಿದ್ದರು . ನಾನು ಫೋಟೊ ತೆಗೆದೆನು. ಆ ಫೋಟೊಗಳಿಗೆ ಸಂಬಂಧಿಸಿದಂತೆ ಒಂದು ಸಿ.ಡಿಯನ್ನು ತಯಾರಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ.

ನಾನು ಫೋಟೋಗಳನ್ನು ತೆಗೆದ ಬಗ್ಗೆ ಪೋಲಿಸರಿಗೆ ಪ್ರಮಾಣ ಪತ್ರವನ್ನು ಕೊಟ್ಟಿದ್ದೆನು . (ಸಸಅ ರವರು ಸಿ.ಸಿ.1728/2017 ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ಪ್ರಮಾಣ ಪತ್ರವನ್ನು ಸಾಕ್ಷಿಗೆ ತೋರಿಸಲು ಹಾಗೂ ಅದರ ದೃಢೀಕೃತ ಪ್ರತಿಯನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು , ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಕೊಟ್ಟ ಪ್ರಮಾಣ ಪತ್ರವನ್ನು ತನಿಖಾಧಿಕಾರಿಯು ಸಿ.ಸಿ.1728/2017 ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪ್ರಮಾಣ ಪತ್ರವು ಅವಶ್ಯಕವಾಗಿರುವ ಕಾರಣ ಆ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು . ಸಾಕ್ಷಿಯು ಆ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ಸದರಿ ಪ್ರಮಾಣ ಪತ್ರದೊಂದಿಗೆ ಈ ಪ್ರಕರಣದಲ್ಲಿ ಹಾಜರು ಪಡಿಸಿದ ಅದರ ದೃಢೀಕೃತ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಸರಿ ಇದೆ .) ಸದರಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ-32 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-12 ರಲ್ಲಿ ಕಾಣುವ ಆಭರಣಗಳನ್ನು ನೋಡಿ ಗುರುತಿಸಿ ಆ ದಿನ ನಾನು ಫೊಟೋ ತೆಗೆದ ಆಭರಣಗಳಲ್ಲಿ ಇವುಗಳೂ ಸಹ ಇದ್ದವು ಎಂದು ನುಡಿದಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿ, ಆ ದಿನ ಈ ಆರೋಪಿತರಿಂದ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದರು ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ - ಶ್ರೀ. ಎ ಡಿ ಎಲ ವಕೀಲರಿಂದ**

ನಾನು ನೊಂದಾಯಿತ ಫೊಟೊಗ್ರಾಫರ ಅಲ್ಲ ಎಂದರೆ ನಿಜ. ನಾನು ಈ ಬಗ್ಗೆ ಯಾವುದೇ ವಿಶೇಷ ತರಬೇತಿ ಅಥವಾ ವಿದ್ಯಾಭ್ಯಾಸವನ್ನು ಪಡೆದಿಲ್ಲ ಎಂದರೆ ನಿಜ. ನಾನು ಪೋಲಿಸರ ಬಳಿ ಯಾವುದೇ ಹೇಳಿಕೆ ಕೊಟ್ಟಿಲ್ಲ. ನಾನು 8 ವರ್ಷಗಳಿಂದ ಫೋಟೊಗ್ರಾಫರನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಬಾಯಿಮಾತಿನಲ್ಲಿ ಈ ದಿನ ಹೇಳುತ್ತಿದ್ದೇನೆ. ಫೋಟೊ ತೆಗೆಯಲು ಪಂಚನಾಮೆಗೆ ಬರುವಂತೆ ಪೋಲಿಸರು ನನಗೆ ನೋಟೀಸ ಕೊಟ್ಟಿರಲಿಲ್ಲ. ದೇವಮಾನೆ ಎಂಬ ಪೋಲಿಸರು ನನಗೆ ಫೋನ ಮಾಡಿ ಕರೆಸಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಘಟನೆಗಳು ನಡೆಯುವ ಕಾಲಕ್ಕೆ ದೇವಮಾನೆ ಎಂಬ ಪೋಲಿಸ ನನ್ನ ಜೊತೆ ಇದ್ದರು. ಆ ದಿನ ಪಂಚನಾಮೆಗಳನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗಳನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆ ಪಂಚನಾಮೆಗಳನ್ನು ಲ್ಯಾಪ ಟಾಪನಲ್ಲಿ ತಯಾರಿಸಿದ್ದರು. ಯಾರು ಟೈಪ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆಗ ಅಲ್ಲಿ ಪೋಲಿಸರು ಮತ್ತು 25-30 ಜನ ಸಾರ್ವಜನಿಕರು ಸೇರಿದ್ದರು. ಆ ದಿನ ಹಾಜರಿದ್ದ ಸಾರ್ವಜನಿಕರ ಮತ್ತು ಪೋಲಿಸರ ಹೆಸರುಗಳು ನನಗೆ ಗೊತ್ತಿಲ್ಲ. ದೇವಮಾನೆ ಒಬ್ಬರ ಹೆಸರು ಗೊತ್ತಿದೆ. ನಿಪಿ-21 ರಲ್ಲಿ ಕಾಣುವ ರೀತಿಯ ವಸ್ತುಗಳು ಅಟೋಮೊಬೈಲ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ನಿಜ. ಆ ದಿನ ಇವೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದರು ಎಂದು ತೋರಿಸಲು ಅವುಗಳ ಮೇಲೆ ಯಾವುದೇ ವಿಶೇಷ ಗುರುತುಗಳು ಇಲ್ಲ ಎಂದರೆ ನಿಜ. ಆ ದಿನ ನೋಡಿದ ಕಾರ ಮತ್ತು ವ್ಯಾನಿನ ಸಂಖ್ಯೆಗಳು ಮತ್ತು ಅವುಗಳ ಮಾಲಿಕರ ಹೆಸರುಗಳು ನನಗೆ ಗೊತ್ತಿಲ್ಲ. ನನಗೆ ಆರೋಪಿತರ ಹೆಸರು ಮತ್ತು ವಿಳಾಸಗಳು ಗೊತ್ತಿಲ್ಲ. ಆ ದಿನ ಆರೋಪಿತರ ಮತ್ತು ಪೋಲಿಸರ ಮಧ್ಯೆ ಏನು ಮಾತುಕತೆ ನಡೆಯಿತು ಎಂದು ನನಗೆ ಗೊತ್ತಿಲ್ಲ. ಆರೋಪಿತರು ನನ್ನನ್ನು ಆ ದಿನ ಮಾತನಾಡಿಸಲಿಲ್ಲ ಮತ್ತು ನನಗೆ ಯಾವುದೇ ವಿಷಯವನ್ನು ಹೇಳಿಲ್ಲ. ಆ ದಿನ ನಿಖರವಾಗಿ ಯಾವ ಯಾವ ಆಭರಣಗಳನ್ನು ನೋಡಿದ್ದೆ ಎಂದು ಹೇಳಲು ಆಗುವುದಿಲ್ಲ. ಆ ದಿನ ಒಟ್ಟು ಎಷ್ಟು ಪಂಚನಾಮೆಗಳನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ನಾನು ಎಷ್ಟು ಸಹಿ ಮಾಡಿದ್ದೆ ಎಂದು ನನಗೆ ಗೊತ್ತಿಲ್ಲ. ಆ ದಿನ ವಾಹನಗಳ ಡಿಕ್ಕಿಯಿಂದ ಯಾರು ನಿಪಿ-21 ರಲ್ಲಿ ಕಾಣುವ ವಸ್ತುಗಳನ್ನು ತೆಗೆದು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಕಾರಿನ ಚಾಲಕನ ಸೀಟಿನ ಅಡಿಯಿಂದ ಯಾವ ಆರೋಪಿ ಆಭರಣಗಳನ್ನು ತೆಗೆದು ಕೊಟ್ಟನು ಎಂದು ನಿಖರವಾಗಿ ಹೇಳಲು ಆಗವುದಿಲ್ಲ. ಆ ದಿನ ನಿಖರವಗಾಗಿ ಎಷ್ಟು ಫೋಟೊಗಳನ್ನು ತಗೆದೆ ಎಂದು ಹೇಳಲು ಆಗವುದಿಲ್ಲ. ಫೋಟೊ ತೆಗೆದ ಬಗ್ಗೆ ನಾನು ಬಿಲ್ಲನ್ನು ಪೋಲಿಸರಿಗೆ ಕೊಟ್ಟಿರಲಿಲ್ಲ. ಆದರೆ ಅವರು ಅದರ ಹಣವನ್ನು ನನಗೆ ಕೊಟ್ಟಿದ್ದರು. ನಾನು ಫೊಟೊ ತಗೆದಿಲ್ಲ ಆ ಕಾರಣಕ್ಕಾಗಿ ಬಿಲ್ಲನ್ನು ಕೊಟ್ಟಿಲ್ಲ ಮತ್ತು ಪೋಲಿಸರು ನನಗೆ ಹಣವನ್ನು ಸಹ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಯಾವುದೇ ವಿಡಿಯೋ ತೆಗೆದಿಲ್ಲ. ನಿಪಿ-32 ರಂತೆ ಪ್ರಮಾಣ ಪತ್ರವನ್ನು ನೀಡಲು ನನಗೆ ಅಧಿಕಾರ ಇಲ್ಲ, ವಿಶೇಷ ತರಬೇತಿ ಪಡೆದ ವ್ಯಕ್ತಿ ಮಾತ್ರ ನೀಡಬೇಕು ಎಂದರೆ ಸರಿಯಲ್ಲ. ನಿಪಿ-32 ರಂತೆ ಪ್ರಮಾಣ ಪತ್ರವನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಫೋಟೊಗಳನ್ನು

ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ , ಯಾವುದೇ ವಸ್ತುಗಳನ್ನು, ಆಭರಣಗಳನ್ನು ಮತ್ತು ವಾಹನಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ . ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ-21 ರಲ್ಲಿ ಕಾಣುವ ವಸ್ತುಗಳಿಗೂ , ಬಂಗಾರ ಮತ್ತು ಬೆಳ್ಳಿಯ ಆಭರಣಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಪೋಲಿಸರು ಫೋಟೊಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತೆಗೆಸಿಕೊಂಡು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

***( ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)***

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ.೯೮/೨೦೧೮**

**ಪಿಡಬ್ಲ್ಯು ೫**

**ಸಿಡಬ್ಲ್ಯು ೬**

ಹೆಸರು : ಜಾಕೀರ ಮೆಹಬೂಬಸಾಬ ಬಡೇಗಾರ

ವಯಸ್ಸು : ೨೭ ವರ್ಷ

ಉದ್ಯೋಗ : ವ್ಯವಹಾರ

ವಾಸ : ಜಳಕಾ ಗಲ್ಲಿ, ಖಾನಾಪೂರ.

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ **೭** ಗೊತ್ತು. **(**ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ಮೂಲ ಪಂಚನಾಮೆಯನ್ನು ಸಾಕ್ಷಿಗಳಿಗೆ ತೋರಿಸಲು ಹಾಗೂ ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. **ಈ ಪ್ರಕರಣದಲ್ಲಿ ಜಪ್ತು ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು** ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಯು ಅವಶ್ಯಕವಾಗಿರುವ ಕಾರಣ ಆ ಪಂಚನಾಮೆಯನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಯನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.**)** ಆ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅದನ್ನು ನಿಪಿ-೨೬ ಎಂದು ಗುರುತಿಸಲಾಯಿತು.

ದಿನಾಂಕ **೧೮-೧೦-೨೦೧೭** ರಂದು ಬೆಳಿಗ್ಗೆ **೭.೦೦** ಗಂಟೆಗೆ ನಾನು ಮತ್ತು ಚಾಸಾ **೭** ರವರು ಖಾನಾಪೂರ ಪೋಲಿಸ ಠಾಣೆಯ ಎದುರು ವಾಕಿಂಗ ಹೋಗಿದ್ದೆವು. ಆಗ ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದರು. ಆಗ ಠಾಣೆಯಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಆಗ ಪೋಲಿಸರು ಆ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ನಮ್ಮನ್ನು ಕರೆದುಕೊಂಡು ಹೋದರೆ ಬೈಕಗಳನ್ನು ತೋರಿಸುತ್ತೇವೆ ಎಂದು ಹೇಳಿದರು. ಆಗ ಪೋಲಿಸ ವಾಹನದಲ್ಲಿ ನಾನು, ಚಾಸಾ **೭**, ಪೋಲಿಸರು ಮತ್ತು ಇಬ್ಬರು ಆರೋಪಿತರು ಖಾನಾಪೂರ ಬಸ್ ಡಿಪೋಗೆ ಹೋದೆವು. ಬಸ್ ನಿಲ್ದಾಣದ ಬಳಿ ಇರುವ ಒಂದು ಮರದ ಬಳಿ ಒಂದು ಬಜಾಜ ಪಲ್ಸರ ಬೈಕ ಸಂಖ್ಯೆ ಜಿಎ-**೦೭/ಎ-೪೦೪೩** ನಿಂತಿತ್ತು. ಆ ಇಬ್ಬರು ಆರೋಪಿತರು ಆ ಬೈಕನ್ನು ತೋರಿಸಿದರು. ಸ್ಥಳದಲ್ಲಿ ಪೋಲಿಸರು ಎರಡು ಫೋಟೊಗಳನ್ನು ತೆಗೆದರು. ಸಾಕ್ಷಿಯು ಸದರಿ

ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-೨೭ ಮತ್ತು ನಿಪಿ-೨೮ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೨೭ ಮತ್ತು ನಿಪಿ-೨೮ ರಲ್ಲಿ ಕಾಣುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ನಂತರ ಪೋಲಿಸರು ಸ್ಥಳದಲ್ಲಿ ತಮ್ಮ ಲ್ಯಾಪ ಟಾಪ್ ನಲ್ಲಿ ಪಂಚನಾಮೆ ತಯಾರಿಸಿ ನಮ್ಮ ಸಹಿ ಪಡೆದರು. ಆ ವಾಹನವನ್ನು ಮತ್ತು ಆರೋಪಿತರನ್ನು ವಾಪಸ ಠಾಣೆಗೆ ಕರೆದುಕೊಂಡು ಹೋದರು. ಆ ವಾಹನವನ್ನು ಅವರು ಯಾವ ಕಾರಣಕ್ಕೆ ಬಳಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ಇಬ್ಬರು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ಹಾಜರಿರುವುದಿಲ್ಲ. ( ೧ ಮತ್ತು ೨ನೇ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಪೋಲಿಸರು ಹಾಜರು ಪಡಿಸಿರುವುದಿಲ್ಲ. ೧ ಮತ್ತು ೨ ನೇ ಆರೋಪಿತರ ಪರ ವಕೀಲರು ಅವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ನಾವು ಠಾಣೆಗೆ ಹೋದಾಗ ಪೋಲಿಸರು ಆರೋಪಿತರನ್ನು ವಿಚಾರಿಸಿದ್ದು, ಆರೋಪಿತರು ತಾವು ಕಳ್ಳತನ ಮಾಡಲು ಬಳಸಿದ ವಾಹನವನ್ನು ತೋರಿಸುತ್ತೇವೆ ಎಂದು ಹೇಳಿದ್ದರು ಎಂದರೆ ನಿಜ. ಪಂಚನಾಮೆ ಕಾಲಕ್ಕೆ ೧ ಮತ್ತು ೨ನೇ ಆರೋಪಿತರು ತಾವು ಇದೇ ಬೈಕನ್ನು ಬಳಸಿ ಕಳ್ಳತನ ಮಾಡುತ್ತಿದ್ದೆವು ಎಂದು ಹೇಳಿದ್ದರು ಎಂದರೆ ನಿಜ.

ಪಾಟೀ ಸವಾಲುಃ ಶ್ರೀ ಎ ಡಿ ಎಲ ವಕೀಲರಿಂದ

ನಾನು ಮೊಬೈಲ ವ್ಯವಹಾರ ಮಡುತ್ತೇನೆ. ಬೆಳಿಗ್ಗೆ ೯.೦೦ ರಿಂದ ರಾತ್ರಿ ೧೦.೦೦ ರವರೆಗೆ ನಾನು ಮೊಬೈಲ ಅಂಗಡಿಯಲ್ಲಿ ಇರುತ್ತೇನೆ. ನನ್ನ ಅಂಗಡಿಯ ವ್ಯಾಪಾರ ಚೆನ್ನಾಗಿದೆ. ನಾನು ಪ್ರತಿ ದಿನ ಅಂಗಡಿಯಲ್ಲಿ ಕುಳಿತು ಎಲ್ಲ ಗಿರಾಕಿಗಳೊಂದಿಗೆ ಮಾತನಾಡಿ ವ್ಯವಹಾರ ಮಾಡುತ್ತೇನೆ. ನನ್ನ ಅಂಗಡಿಗೆ ಬೇಕಾಗುವ ಎಲ್ಲ ವಸ್ತುಗಳನ್ನು ಖರೀದಿಸುವ ಮತ್ತು ವಿಲೇವಾರಿ ಮಾಡುವ ಕೆಲಸಗಳನ್ನು ನಾನೇ ಮಾಡುತ್ತೇನೆ. ಆ ದಿನ ನಮ್ಮನ್ನು ಕರೆದ ಪೋಲಿಸರ ಹೆಸರು ಮತ್ತು ಹುದ್ದೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾವು ಹೋದಾಗ ಆರೋಪಿತರು ಎಲ್ಲಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ಆರೋಪಿತರ ಹೆಸರು, ವಿಳಾಸ ಗೊತ್ತಿಲ್ಲ. ನಾನು ಅವರ ಹೆಸರು ವಿಳಾಸಗಳನ್ನು ವಿಚಾರಿಸಿಲ್ಲ. ನಾವು ಠಾಣೆಯನ್ನು ಬಿಡುವ ಮುನ್ನ ನಮ್ಮ ಮತ್ತು ಆರೋಪಿತರ ಹಾಗೂ ಪೋಲಿಸರ ಮಧ್ಯೆ

ಯಾವುದೇ ಸಂಭಾಷಣೆ ಆಗಿಲ್ಲ. ಆ ದಿನ ನಮ್ಮ ಜೊತೆ ಬಂದ ಪೋಲಿಸರ ಹೆಸರು ಮತ್ತು ಹುದ್ದೆ ನನಗೆ ಹೇಳಲು ಆಗುವುದಿಲ್ಲ. ಆ ದಿನ ನಾವು ಟಾಟಾ ಸುಮೊ ವಾಹನದಲ್ಲಿ ಸ್ಥಳಕ್ಕೆ ಬಂದಿದ್ದೆವು. ಆ ವಾಹನದ ಸಂಖ್ಯೆ ಮತ್ತು ಅದರ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಆ ದಿನ ಬೆಳಿಗ್ಗೆ ೭.೩೦ ಕ್ಕೆ ಠಾಣೆಯನ್ನು ಬಿಟ್ಟು ೧೦ ನಿಮಿಷದಲ್ಲಿ ಬಸ್ ನಿಲ್ದಾಣಕ್ಕೆ ಬಂದಿದ್ದೆವು. ಠಾಣೆಯನ್ನು ಬಿಟ್ಟು ಬಸ್ ನಿಲ್ದಾಣಕ್ಕೆ ಬರುವವರೆಗೆ ನಮ್ಮ ಮತ್ತು ಆರೋಪಿತರ ಹಾಗೂ ಪೋಲಿಸರ ಮಧ್ಯೆ ಯಾವುದೇ ಮಾತುಕತೆ ನಡೆಯಲಿಲ್ಲ. ಆ ದಿನ ಸುಮೊ ವಾಹನದ ಚಾಲಕ ನೇರವಾಗಿ ವಾಹನವನ್ನು ಬಸ ನಿಲ್ದಾಣಕ್ಕೆ ತೆಗೆದುಕೊಂಡು ಬಂದಿದ್ದ ಎಂದರೆ ನಿಜ. ಆದರೆ ಠಾಣೆಯಲ್ಲಿ ಆ ರೋಪಿತರು ಬಸ ನಿಲ್ದಾಣಕ್ಕೆ ಹೋಗುವಂತೆ ಹೇಳಿದ್ದರು. ಆ ರೀತಿ ಯಾವ ಆರೋಪಿ ಹೇಳಿದ್ದ ಮತ್ತು ಆತನ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ಖಾನಾಪೂರ ಬಸ ನಿಲ್ದಾಣ ಜನನಿಬಿಡ ಪ್ರದೇಶ ಎಂದರೆ ನಿಜ. ಆ ಬಸ್ ನಿಲ್ದಾಣಕ್ಕೆ ಎರಡು ಕಡೆಗಳಿಂದ ಪ್ರವೇಶ ದ್ವಾರ ಇದ್ದು ನಾವು ಬೆಳಗಾವಿಕಡೆಗೆ ಇರುವ ದ್ವಾರದಿಂದ ಒಳಗೆ ಹೋಗಿದ್ದೆವು. ಆ ಸ್ಥಳದಲ್ಲಿ ಸುಮಾರು ೩೦-೪೦ ದ್ವಿಚಕ್ರ ವಾಹನಗಳು ಇದ್ದವು. ಅವುಗಳ ಸಂಖ್ಯೆ ಹೇಳಲು ಆಗವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಾಹನದ ಮಾಲಿಕರು ಯಾರು ಎಂದು ನನಗೆ ಗೊತ್ತಿಲ್ಲ. ಆ ದಿನ ಸಿಂಗಲ್ ಸ್ಟ್ಯಾಂಡ ಅಥವಾ ಡಬಲ್ ಸ್ಟ್ಯಾಂಡ ಹಾಕಿ ಆ ಬೈಕನ್ನು ನಿಲ್ಲಿಸಿದ್ದರೋ ಎಂದು ನನಗೆ ಗೊತ್ತಿಲ್ಲ. ಆ ವಾಹನದ ಹ್ಯಾಂಡಲ ಲಾಕ್ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಅದು ಚಾಲ್ತಿ ಸ್ಥಿತಿಯಲ್ಲಿತ್ತೋ ಇಲ್ಲವೋ ಎಂದು ನಾವು ನೋಡಲಿಲ್ಲ.

ಪಂಚನಾಮೆಯನ್ನು ಇದೇ ರೀತಿ ಬರೆಯುವಂತೆ ನಾವು ಮಾಹಿತಿ ಕೊಟ್ಟಿಲ್ಲ. ಪಂಚನಾಮೆಯನ್ನು ಯಾರು ತಯಾರಿಸಿದರು, ಯಾರು ಟೈಪ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗೆ ನಾವು ಡಿಪೊದಲ್ಲಿ ಸಹಿ ಮಾಡಿದ್ದೆವು. ಆ ದಿನ ಪಂಚನಾಮೆಯನ್ನು ಸುಮೊ ವಾಹನದಲ್ಲಿ ಕುಳಿತು ತಯಾರಿಸಿದ್ದರು. ಆ ದಿನ ಫೋಟೊ ತೆಗೆದ ಛಾಯಗ್ರಾಹಕನ ಹೆಸರು ಗೊತ್ತಿಲ್ಲ. ಪೋಲಿಸರು ಹೇಳಿದಂತೆ ಆತನು ಫೋಟೊ ತೆಗೆದಿದ್ದನು. ಆ ದಿನ ಗಣೇಶ ಎಂಬ ಆರೋಪಿಯು ಆ ವಾಹನವನ್ನು ತೋರಿಸಿದ್ದನು. ಆಗ ಸ್ಥಳದಲ್ಲಿ ೨೫-೩೦ ಜನ ಸೇರಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಾಹನವನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಪೋಲಿಸರು ಫೋಟೊಗಳನ್ನು ತಮಗೆ ಅನುಕೂಲ ಆಗುವಂತೆ ತೆಗೆಯಿಸಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಆ ದಿನ ನಾನು ನೋಡಿದ ವಾಹನದ ಸಂಖ್ಯೆ ಜಿಎ-೦೭/೪೩೪೦ ಆಗಿತ್ತು. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**
**ಸಿ.ಸಿ.ನಂ.೯೮/೨೦೧೮**

**ಪಿಡಬ್ಲು ೬**
**ಸಿಡಬ್ಲು ೭**

ಹೆಸರು : ತುಕಾರಾಮ ಸಿದ್ದಪ್ಪ ಕೋಲಕಾರ
ವಯಸ್ಸು : ೨೬ ವರ್ಷ
ಉದ್ಯೋಗ **:** ಕೂಲಿ ಕೆಲಸ
ವಾಸ : ದೇವಲತ್ತಿ ಗ್ರಾಮ, ಖಾನಾಪೂರ.

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ **೬** ಗೊತ್ತು. **(**ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ಮೂಲ ಪಂಚನಾಮೆಯನ್ನು ಸಾಕ್ಷಿಗಳಿಗೆ ತೋರಿಸಲು ಹಾಗೂ ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಯು ಅವಶ್ಯಕವಾಗಿರುವ ಕಾರಣ ಆ ಪಂಚನಾಮೆಯನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಯನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಯ ದೃಢೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅದನ್ನು ನಿಪಿ-೨೬ ಎಂದು ಗುರುತಿಸಲಾಯಿತು.

ಒಂದು ವರ್ಷದ ಹಿಂದೆ ಬೆಳಿಗ್ಗೆ **೭.೩೦** ಕ್ಕೆ ನಾನು ಖಾನಾಪೂರ-ನಂದಗಡ ರಸ್ತೆಯಲ್ಲಿ ಆಸ್ಪತ್ರೆಗೆ ಹೊಗುತ್ತಿದ್ದೆನು. ಆಗ ಪೋಲಿಸರು ನಮ್ಮನ್ನು ಬಸ್ ಡಿಪೊಗೆ ಕರೆಸಿದ್ದರು. ಅಲ್ಲಿ ಒಂದು ದಾಖಲೆಗೆ ಸಹಿ ಮಾಡುವಂತೆ ಹೇಳಿದರು ನಾನು ಸಹಿ ಮಾಡಿದೆ. ಆ ದಿನ ಅಲ್ಲಿ ಪೋಲಿಸರ ಜೊತೆ ಇಬ್ಬರು ವ್ಯಕ್ತಿಗಳು ನಿಂತಿದ್ದರು. ಅಲ್ಲಿ ಒಂದು ಬಜಾಜ ಪಲ್ಸರ ಬೈಕ ಇತ್ತು. ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಅಲ್ಲಿ ಪೋಲಿಸರು ನಮ್ಮನ್ನು ನಿಲ್ಲಿಸಿ ಫೋಟೊ ತೆಗೆದರು. ಸಾಕ್ಷಿಯು ನಿಪಿ-**೨೭** ಮತ್ತು ನಿಪಿ-**೨೮** ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಆ ಬೈಕನ್ನು ಮತ್ತು ಇಬ್ಬರು ವ್ಯಕ್ತಿಗಳನ್ನು ವಾಪಸ ಠಾಣೆಗೆ ಕರೆದುಕೊಂಡು ಹೋದರು. ಸಾಕ್ಷಿಯು ನಿಪಿ-**೨೭** ಮತ್ತು ನಿಪಿ-**೨೮** ರಲ್ಲಿ ಕಾಣುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಅಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ವಾಹನವನ್ನು ಅವರು ಯಾವ ಕಾರಣಕ್ಕಾಗಿ

ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ( ೧ ಮತ್ತು ೨ನೇ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಪೋಲಿಸರು ಹಾಜರು ಪಡಿಸಿರುವುದಿಲ್ಲ. ೧ ಮತ್ತು ೨ ನೇ ಆರೋಪಿತರ ಪರ ವಕೀಲರು ಅವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ದಿನಾಂಕ ೧೮-೧೦-೨೦೧೭ ರಂದು ನನ್ನನ್ನು ಮತ್ತು ಚಾಸಾ ೬ ರವರನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿತರನ್ನು ವಿಚಾರಿಸಿದ್ದು, ಆರೋಪಿತರು ತಾವು ಕಳ್ಳತನ ಮಾಡಲು ಬಳಸಿದ ವಾಹನವನ್ನು ತೋರಿಸುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮನ್ನು, ಇಬ್ಬರು ಆರೋಪಿತರನ್ನು ಪೋಲಿಸ ವಾಹನದಲ್ಲಿ ಖಾನಾಪೂರ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಆ ದಿನ ನೋಡಿದ ಬೈಕ ಸಂಖ್ಯೆ ಜಿಎ-೦೭/ಎ-೪೦೪೩ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಬೈಕನ್ನು ತೋರಿಸಿ ೧ ಮತ್ತು ೨ನೇ ಆರೋಪಿತರು ತಾವು ಇದೇ ಬೈಕನ್ನು ಬಳಸಿ ಕಳ್ಳತನ ಮಾಡುತ್ತಿದ್ದೆವು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ ಪೋಲಿಸರು ಪಂಚನಾಮೆ ತಯಾರಿಸಿ ಆ ವಾಹನವನ್ನು ತೆಗೆದುಕೊಂಡರು ಎಂದರೆ ನಿಜ. ನಾನು ಆ ಸ್ಥಳದಲ್ಲಿ ಸಹಿ ಮಾಡಿದ್ದೆ ಎಂದರೆ ನಿಜ. ಆ ದಿನ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ, ೧ ಮತ್ತು ೨ನೇ ಆರೋಪಿತರು ನಮ್ಮನ್ನು ಬಸ ನಿಲ್ದಾಣಕ್ಕೆ ಕರೆದುಕೊಂಡು ಬಂದು ಬೈಕನ್ನು ತೋರಿಸಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಎಲ್ಲ ವಿಷಯಗಳು ಗೊತ್ತಿದ್ದೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಎ ಡಿ ಎಲ ವಕೀಲರಿಂದ

ಆ ದಿನ ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೋಲಿಸರು ನಮ್ಮನ್ನು ನಿಲ್ಲಿಸಿ ಫೋಟೊ ತಗೆಸಿದ್ದರು. ಯಾವ ಕಾರಣಕ್ಕಾಗಿ ಫೋಟೊ ತೆಗೆಸಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಆ ಬೈಕನ್ನು ಚಲಾಯಿಸಿಕೊಂಡು ತೆಗೆದುಕೊಂಡು ಹೋದರು. ಆ ದಿನ ಬಸ್ ನಿಲ್ದಾಣದಲ್ಲಿ ಸುಮಾರು ೩೦ ಬೈಕಗಳು ಇದ್ದವು. ಅವುಗಳ ಸಂಖ್ಯೆ ನನಗೆ ಗೊತ್ತಿಲ್ಲ. ಆ ದಿನ ಪೋಲಿಸರ ಜೊತೆಯಲ್ಲಿದ್ದ ವ್ಯಕ್ತಿಗಳ ಹೆಸರುಗಳು ನನಗೆ ಗೊತ್ತಿಲ್ಲ. ನಾನು ಸಹಿ

ಮಾಡುವ ಮುನ್ನ ಪೋಲಿಸರು ನನಗೆ ಯಾವ ವಿಷಯವನ್ನು ಹೇಳಿರಲಿಲ್ಲ. ನಾನು ಸಹಿ ಮಾಡಿದ ನಂತರವೂ ಸಹ ಪೋಲಿಸರು ನನಗೆ ಏನು ವಿಷಯವನ್ನು ಹೇಳಿರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**
**ಸಿ.ಸಿ.ನಂ.೯೮/೨೦೧೮**

**ಪಿಡಬ್ಲು ೩**
**ಸಿಡಬ್ಲು ೪**

ಹೆಸರು : ಸಂಜಯ ಈಶ್ವರ ಮುತಗಿ
ವಯಸ್ಸು : ೪೩ ವರ್ಷ
ಉದ್ಯೋಗ : ವ್ಯವಸಾಯ
ವಾಸ : ಜಾಂಬೋಟಿ ಗ್ರಾಮ, ಖಾನಾಪೂರ

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ ೫ ರವರು ಗೊತ್ತು. ಆರೋಪಿತರನ್ನು ನೋಡಿದ್ದೇನೆ. (ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ೩ ಮೂಲ ಪಂಚನಾಮೆಗಳನ್ನು ಸಾಕ್ಷಿಗಳಿಗೆ ತೋರಿಸಲು ಹಾಗೂ ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಗಳು ಅವಶ್ಯಕವಾಗಿರುವ ಕಾರಣ ಆ ೩ ಮೂಲ ಪಂಚನಾಮೆಗಳನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಗಳನ್ನು ಮತ್ತು ಅವುಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಗಳ ದೃಢೀಕೃತ ಪ್ರತಿಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-೧೪ ರಿಂದ ೧೬ ಎಂದು ಗುರುತಿಸಲಾಯಿತು.

ದಿನಾಂಕ ೧೭-೧೦-೨೦೧೭ ರಂದು ಸಂಜೆ ೭.೦೦ ಗಂಟೆಗೆ ನಾನು ಮತ್ತು ಚಾಸಾ ೫ ರವರು ಜಾಂಬೋಟಿ ಗ್ರಾಮದ ಖಾನಾಪೂರ ಕ್ರಾಸನಲ್ಲಿ ನಡೆದುಕೊಂಡು ಹೊಗುತ್ತಿದ್ದಾಗ ಪೋಲಿಸರು ನಮ್ಮನ್ನು ಪಂಚನಾಮೆಗೆ ಬರುವಂತೆ ಕರೆದರು. ಆಗ ಪೋಲಿಸರ ವಶದಲ್ಲಿ ಮೂರು ಜನ ಆರೋಪಿತರು ಮತ್ತು ಒಂದು ವ್ಯಾಕ್ಸ ವ್ಯಾಗನ ಕಾರ ಮತ್ತು ಮಾರುತಿ ಸುಜುಕಿ ವ್ಯಾನ ಇದ್ದವು. ಪೋಲಿಸರಿಗೆ ಸಂಶಯ ಬಂದು ವ್ಯಾಕ್ಸ ವ್ಯಾಗನ ಕಾರಿನ ಡಿಕ್ಕಿಯನ್ನು ಪರಿಶೀಲಿಸಿದರು. ಅಲ್ಲಿ ಒಂದು ಫಾಸ್ ಟ್ರ್ಯಾಕ ಕಂಪನಿಯ ಬ್ಯಾಗ ಇದ್ದು ಅದರಲ್ಲಿ ಎರಡು ಸ್ಕ್ರೂ ಡ್ರೈವರ, ಒಂದು ಕಬ್ಬಿಣದ ಉಳಿ, ಎರಡು ರಾಡ್ ಮತ್ತು ಎರಡು ಪಾನ ಇದ್ದವು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ಪೋಲಿಸರು ನಿಪಿ-೧೪ ರಂತೆ

ಪಂಚನಾಮೆಯನ್ನು ತಮ್ಮ ಲ್ಯಾಪಟಾಪ್ ನಲ್ಲಿ ತಯಾರಿಸಿದರು. ನಂತರ ಪೋಲಿಸರು ಅವೆಲ್ಲವುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಈ ಎಲ್ಲ ವಸ್ತುಗಳನ್ನು ಪೋಲಿಸರು ಆ ದಿನ ಜಪ್ತು ಪಡಿಸಿಕೊಂಡಿದ್ದರು. ಪೋಲಿಸರು ಸ್ಥಳದಲ್ಲಿ ತೆಗೆದ ೫ ಫೋಟೋಗಳನ್ನು ನೋಡಿ ಗುರುತಿಸಿದ್ದು, ಫೋಟೋಗಳನ್ನು ಕ್ರಮವಾಗಿ ನಿಪಿ-೧೭ ರಿಂದ ೨೧ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೧೭ ಮತ್ತು ೧೮ ರಲ್ಲಿ ಕಾಣುವ ಕಾರಗಳನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಜಪ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-೨೧ ರಲ್ಲಿ ಕಾಣುವ ಒಂದು ಫಾಸ್ಟಿಕ ಬ್ಯಾಗ, ಎರಡು ಸ್ಕ್ರೂ ಡ್ರೈವರ, ಒಂದು ಕಬ್ಬಿಣದ ಉಳಿ, ಎರಡು ರಾಡ್, ಒಂದು ಕಟರ್ ಮತ್ತು ಎರಡು ಪಾನಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಪೋಲಿಸರು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ಕಾರುಗಳನ್ನು ತೆಗೆದುಕೊಂಡು, ನಮ್ಮನ್ನು ಕರೆದುಕೊಂಡು ಜಾಂಬೋಟಿ ಹೊರ ಉಪಠಾಣೆಗೆ ಕರೆದುಕೊಂಡು ಹೋದರು. ಉಪಠಾಣೆಯಲ್ಲಿ ೧ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಚಾಲಕನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬೆಳ್ಳಿಯ ಆರತಿ ಸೆಟ್, ಕುಂಕುಮ ಹಾಕುವ ಡಬ್ಬಿ, ಚೆರಿಗೆ, ಚಮಚ ಇತ್ಯಾದಿಗಳನ್ನು ತೆಗೆದು ಹಾಜರು ಪಡಿಸಿದನು. ನಿಖರವಾಗಿ ಆ ದಿನ ಒಟ್ಟು ಎಷ್ಟು ವಸ್ತುಗಳನ್ನು ಹಾಜರು ಪಡಿಸಿದ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸ್ಥಳದಲ್ಲಿ ನಿಪಿ-೧೫ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ಪೋಲಿಸರು ಪಂಚನಾಮೆಯನ್ನು ತಮ್ಮ ಲ್ಯಾಪಟಾಪ್ ನಲ್ಲಿ ತಯಾರಿಸಿದರು. ನಂತರ ಪೋಲಿಸರು ಖಾನಾಪೂರದಿಂದ ಒಬ್ಬ ವ್ಯಕ್ತಿಯನ್ನು ಕರೆಸಿ ಅವೆಲ್ಲವುಗಳನ್ನು ತೂಕ ಮಾಡಿಸಿ ತಮ್ಮ ವಶಕ್ಕೆ ಪಡೆದುಕೊಂಡರು. ಪೋಲಿಸರು ಸ್ಥಳದಲ್ಲಿ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-೨೨ ಮತ್ತು ೨೩ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೧೧ ಮತ್ತು ೧೨ ರಲ್ಲಿ ಕಾಣುವ ಬಂಗಾರದ ೩ ಉಂಗುರಗಳು, ಎರಡು ಜೊತೆ ಕಿವಿಯೋಲೆ, ಬೆಳ್ಳಿಯ ವಾಟಿಗೆ, ಲಕ್ಷ್ಮಿ ಮೂರ್ತಿ, ಚಮಚವನ್ನು ನೋಡಿ ಗುರುತಿಸಿ, ಅವುಗಳನ್ನು ಆ ದಿನ ೧ನೇ ಆರೋಪಿಯ ವಶದಿಂದ ಜಪ್ತು ಪಡಿಕೊಂಡ ಆಭರಣಗಳು ಎಂದು ನುಡಿದಿರುತ್ತಾರೆ.

ಸದರಿ ಉಪಠಾಣೆಯಲ್ಲಿ ೨ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಹಿಂದಿನ ಸೀಟಿನ ಅಡಿಯಲ್ಲಿದ್ದ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬೆಳ್ಳಿಯ ಆರತಿ ಸೆಟ್, ಕುಂಕುಮ ಹಾಕುವ ಡಬ್ಬಿ, ಚೆರಿಗೆ, ಚಮಚ ಇತ್ಯಾದಿಗಳನ್ನು ತೆಗೆದು ಹಾಜರು ಪಡಿಸಿದನು. ಆ ದಿನ ೨ನೇ ಆರೋಪಿಯು ಸುಮಾರು ೪೨ ವಸ್ತುಗಳನ್ನು ಹಾಜರು ಪಡಿಸಿದ. ನಂತರ ಪೋಲಿಸರು ಒಬ್ಬ ವ್ಯಕ್ತಿಯಿಂದ

ಅವೆಲ್ಲವುಗಳನ್ನು ತೂಕ ಮಾಡಿಸಿ, ಪೋಲಿಸರು ಸ್ಥಳದಲ್ಲಿ ನಿಪಿ-೧೬ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು ಮತ್ತು ಆ ವಸ್ತುಗಳನ್ನು ಜಪ್ತುಪಡಿಸಿಕೊಂಡರು. ಪೋಲಿಸರು ಪಂಚನಾಮೆಯನ್ನು ತಮ್ಮ ಲ್ಯಾಪಟಾಪ್ ನಲ್ಲಿ ತಯಾರಿಸಿದರು. ನಂತರ ನಾನು ಅದಕ್ಕೆ ಸಹಿ ಮಾಡಿದೆ. ಪೋಲಿಸರು ಸ್ಥಳದಲ್ಲಿ ತೆಗೆದ ಎರಡು ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-೨೪ ಮತ್ತು ೨೫ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-೧೧ ಮತ್ತು ೧೨ ರಲ್ಲಿ ಕಾಣುವ ಬಂಗಾರದ ಎರಡು ಚೈನಗಳು, ಬ್ರಾಸಲೇಟ, ಬೆಳ್ಳಿಯ ಚೆರಿಗೆಯನ್ನು ನೋಡಿ ಗುರುತಿಸಿ, ಅವುಗಳನ್ನು ಆ ದಿನ ೨ ನೇ ಆರೋಪಿಯ ವಶದಿಂದ ಜಪ್ತು ಪಡಿಕೊಂಡ ಆಭರಣಗಳು ಎಂದು ನುಡಿದಿರುತ್ತಾರೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. **(ಈ ದಿನ** ೧ ಮತ್ತು ೨ ನೇ ಆರೋಪಿತರನ್ನು ನ್ಯಾಯಾಂಗ ಬಂಧನದಿಂದ ಹಾಜರು ಪಡಿಸಿರುವುದಿಲ್ಲ. ಆದರೆ ಅವರನ್ನು ಗುರುತಿಸಲು ಅವರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.) ಆ ಎಲ್ಲ ಆಭರಣಗಳು ಎಲ್ಲಿಂದ ಬಂದಿದ್ದವು ಅವುಗಳು ಹೇಗೆ ಆರೋಪಿತರ ವಶಕ್ಕೆ ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಪೋಲಿಸರು ನಮಗೆ ಏನನ್ನೂ ಹೇಳಿಲ್ಲ ಮತ್ತು ನಾವು ಆ ಬಗ್ಗೆ ವಿಚಾರಿಸಿಲ್ಲ.

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

**ಪಾಟೀ ಸವಾಲು ಃ** ಸಸಅ ರವರಿಂದ

ಆ ದಿನ ಪೋಲಿಸರು ೧ ನೇ ಆರೋಪಿಯಿಂದ ೪೨ ಆಭರಣಗಳನ್ನು ಮತ್ತು ೨ ನೇ ಆರೋಪಿಯಿಂದ ೪೦ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದರು ಎಂದರೆ ನಿಜ. ಪೋಲಿಸರು ೧ ಮತ್ತು ೨ ನೇ ಆರೋಪಿತರನ್ನು ನನ್ನ ಸಮಕ್ಷಮ ವಿಚಾರಿದಾಗ ಅವರು ತಾವು ಹಲವಾರು ಸ್ಥಳಗಳಲ್ಲಿ ಸದರಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೆವು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಮಾರಾಟ ಮಾಡಲು ಬೆಳಗಾವಿಗೆ ಹೋಗುವಾಗ ಪೋಲಿಸರು ಬಂಧಿಸಿದರು ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ೧ ಮತ್ತು ೨ ನೇ ಆರೋಪಿತರು ನಿಪಿ-೨೧ ರಲ್ಲಿ ಕಾಣುವ ವಸ್ತುಗಳನ್ನು ಬಳಸಿ ಮನೆಗಳಲ್ಲಿ ಕಳ್ಳತನ ಮಾಡಿದ್ದೆವು ಎಂದು ನನ್ನ ಸಮಕ್ಷಮ ತಿಳಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಮೇಲೆ ಹೇಳಿದಂತೆ ತಿಳಿಸಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ** ಆರೋಪಿ ಪರ ಶ್ರೀ ಎ ಡಿ ಎಲ ವಕೀಲರಿಂದ

ನನಗೆ ಕನ್ನಡ ಓದಲು, ಬರೆಯಲು ಮತ್ತು ಸರಿಯಾಗಿ ಮಾತನಾಡಲು ಬರುವುದಿಲ್ಲ. ನಾನು ಮತ್ತು ಚಾಸಾ **೫** ರವರು ಪಂಚನಾಮೆಯನ್ನು ಇದೇ ರೀತಿ ಬರೆಯುವಂತೆ ಪೋಲಿಸರಿಗೆ ಮಾಹಿತಿ ಕೊಟ್ಟಿಲ್ಲ. ಪೋಲಿಸರು ಪಂಚನಾಮೆ ತಯಾರಿಸಿ ಇಟ್ಟಿದ್ದರು. ನಾನು ಮತ್ತು ಚಾಸಾ **೫** ರವರು ಅದಕ್ಕೆ ಸಹಿ ಮಾಡಿದೆವು. ಆ ದಿನ ಪೋಲಿಸರು ಅಂದಾಜು ನನ್ನ **೫** ಸಹಿ ಪಡೆದರು. ಆ ದಿನ ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ತಡೆ ಹಿಡಿದು ತಪಾಸಣೆ ಮಾಡಲಿಲ್ಲ. ನನಗೆ ಆರೋಪಿತರ ಪೂರ್ಣ ಹೆಸರುಗಳನ್ನು ಹೇಳಲು ಬರುವುದಿಲ್ಲ. ಪೋಲಿಸರು ಆರೋಪಿತರ ಹೆಸರುಗಳನ್ನು ಹೇಳಿದ್ದರ ಮೇರೆಗೆ ನಾನು ಅವರ ಹೆಸರುಗಳನ್ನು ಹೇಳಿದ್ದೆ. ಆ ದಿನ ನೋಡಿದ ವಾಹನಗಳ ಸಂಖ್ಯೆಗಳನ್ನು ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಜಪ್ತುಪಡಿಸಿಕೊಳ್ಳುವ ವಸ್ತುಗಳನ್ನು ಆರೋಪಿತರು ಕೊಡಬೇಕು ಆದರೆ ನನ್ನ ಸಮಕ್ಷಮ ಪೋಲಿಸರು ಆ ಆಭರಣಗಳನ್ನು ಕೊಟ್ಟಿದ್ದರು ಎಂದರೆ ನಿಜ. ಪ್ರತಿ ಊರಿನಲ್ಲಿ ಆ ಊರಿನ ನಾಮಫಲಕ ಇರುತ್ತದೆ ಎಂದರೆ ನಿಜ. ಜಾಂಬೋಟಿಯಲ್ಲಿ ಖಾನಾಪೂರ ಕ್ರಾಸ ಎಂಬ ಸ್ಥಳದ ನಾಮಫಲಕ ಇಲ್ಲ ಎಂದರೆ ನಿಜ.

ಆ ದಿನ ಪೋಲಿಸರು ಪಡೆದುಕೊಂಡ ವಸ್ತುಗಳಲ್ಲಿ ಎಷ್ಟು ಬಂಗಾರದ ಆಭರಣಗಳು ಮತ್ತು ಎಷ್ಟು ಬೆಳ್ಳಿಯ ಆಭರಣಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಆ ದಿನ ಪೋಲಿಸರು ಫೋಟೊಗಳನ್ನು ಏಕೆ ತೆಗೆದರು ಎಂದು ಗೊತ್ತಿಲ್ಲ. ಬಹುಶಃ ಕಳುವಿನ ಪ್ರಕರಣ ಆಗಿದ್ದ ಕಾರಣ ತೆಗೆದಿರಬಹುದು. ಆ ಪ್ರಕರಣ ಕಳುವಿನ ಪ್ರಕರಣ ಎಂದು ಪೋಲಿಸರು ನನಗೆ ಹೇಳಿದ್ದರು. ನಾನು ಯಾವಾಗಲೂ ಒಂದೇ ರೀತಿಯ ಸಹಿಯನ್ನು ಮಾಡುತ್ತೇನೆ. ಆ ದಿನ ನಾನು ಯಾವುದೇ ಚೀಟಿಗಳ ಮೇಲೆ ಸಹಿ ಮಾಡಿರಲಿಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ-**೧೪** ರಿಂದ **೧೬** ರಂತೆ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಮತ್ತು ವಾಹನಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಆಭರಣಗಳನ್ನು ಆರೋಪಿತರ ವಶದಿಂದ ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುವನ್ನು ನೋಡಿದಾಗ ಇದು ಬಂಗಾರ ಅಥವಾ ಬೆಳ್ಳಿ ಎಂದು ಹೇಳಲು ನಾನು ಯಾವುದೇ ವಿಶೇಷ ತರಬೇತಿಯನ್ನು ಪಡೆದಿಲ್ಲ. ಪೋಲಿಸರು ನಿಪಿ-**೧೭** ರಿಂದ **೨೫** ರಂತೆ ಫೋಟೊಗಳನ್ನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ಆ ದಿನ ಫೋಟೊಗಳನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೊಗಳಲ್ಲಿ ಅವುಗಳನ್ನು ಯಾವ ಸ್ಥಳದಲ್ಲಿ ತೆಗೆಯಲಾಗಿದೆ ಎಂದು ಯಾವುದೇ ಗುರುತುಗಳು ಕಂಡು ಬರುವುದಿಲ್ಲ ಎಂದರೆ ನಿಜ. ಜಾಂಬೋಟಿ ರಸ್ತೆಯು ಹೆದ್ದಾರಿಯಾಗಿದ್ದು ಅಲ್ಲಿ ಸಾಕಷ್ಟು ಜನರು ಮತ್ತು ವಾಹನಗಳು ಓಡಾಡುತ್ತವೆ ಎಂದರೆ ನಿಜ. ಆ

ರಸ್ತೆಯಲ್ಲಿ ಪಂಚನಾಮೆ ಮಾಡಲು ಪೋಲಿಸರು ಸೇರಿದಾಗ ಅಲ್ಲಿ ಕೌತುಕದಿಂದ ಸಾಕಷ್ಟು ಜನರು ಸೇರುತ್ತಾರೆ ಎಂದರೆ ನಿಜ. ಆದರೆ ಆ ದಿನ ಅಲ್ಲಿ ಎಷ್ಟು ಜನ ಸೇರಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಫೋಟೊಗಳಲ್ಲಿ  ಕಾಣುವ ಕಟ್ಟಡ ಅದು ಠಾಣೆಯೋ ಅಥವಾ ಮನೆಯೋ ಎಂದು ಆ ಫೋಟೊದಲ್ಲಿ ಕಂಡು ಬರುವುದಿಲ್ಲ ಎಂದರೆ ನಿಜ. ಸಾಮಾನ್ಯವಾಗಿ ಪೋಲಿಸರು ಹೇಳಿದಂತೆ ಫೋಟೊಗ್ರಾಫರ ಫೋಟೊ ತೆಗೆಯುತ್ತಾನೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-**೨೧** ರಲ್ಲಿ ಕಾಣುವ ವಸ್ತುಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ. ಆ ದಿನ ಇವೇ ವಸ್ತುಗಳನ್ನು ಜಪ್ತು ಪಡಿಸಿಕೊಂಡರು ಎಂದು ಹೇಳಲು ಅವುಗಳ ಮೇಲೆ ಯಾವುದೇ ವಿಶೇಷ ಗುರುತುಗಳು  ಇಲ್ಲ ಎಂದರೆ ನಿಜ. ಆ ವಸ್ತುಗಳಿಗೂ ಮತ್ತು ಬಂಗಾರದ ಆಭರಣಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನಿಪಿ-**೧೭** ರಿಂದ **೨೫** ಫೋಟೊಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತೆಗೆಸಿಕೊಂಡು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  (ಸಿ.ಸಿ.**೧೭೨೮/೨೦೧೭** ರಿಂದ ಪಡೆದು **೩** ಮೂಲ ಪಂಚನಾಮೆಗಳನ್ನು ಆ ಪ್ರಕರಣಕ್ಕೆ ಹಿಂದಿರುಗಿಸಲಾಯಿತು.)

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

ಹೆಚ್ಚುವರಿ **ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ**

**ಸಿ.ಸಿ.ನಂ.೯೮/೨೦೧೮**

**ಪಿಡಬ್ಲು ೪**

**ಸಿಡಬ್ಲು ೫**

ಹೆಸರು : ನಾಗಪ್ಪ ಅಪ್ಪಣ್ಣ ತೇಲಿ

ವಯಸ್ಸು : ೫೦ ವರ್ಷ

ಉದ್ಯೋಗ : ವ್ಯವಸಾಯ

ವಾಸ : ಜಾಂಬೋಟಿ ಗ್ರಾಮ, ಖಾನಾಪೂರ

**ದಿನಾಂಕ ೧೯-೦೯-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ ೪ ರವರು ಗೊತ್ತು. (ಸಸಅ ರವರು ಸಿ.ಸಿ. ೧೭೨೮/೨೦೧೭ ರಲ್ಲಿ ತನಿಖಾಧಿಕಾರಿಯು ಹಾಜರು ಪಡಿಸಿದ ೩ ಮೂಲ ಪಂಚನಾಮೆಗಳನ್ನು ಸಾಕ್ಷಿಗಳಿಗೆ ತೋರಿಸಲು ಮತ್ತು ಅವುಗಳ ದೃಢೀಕೃತ ಪ್ರತಿಗಳನ್ನು ಗುರುತಿಸಲು ಈ ಪ್ರಕರಣಕ್ಕೆ ತೆಗೆದುಕೊಳ್ಳಲು ಪ್ರಾರ್ಥನೆ ಮಾಡಿದ್ದು, ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲುಗಳ ಮೂಲ ಪಂಚನಾಮೆಯನ್ನು ತನಿಖಾಧಿಕಾರಿಯು ಸಿ.ಸಿ.೧೭೨೮/೨೦೧೭ ರಲ್ಲಿ ಹಾಜರು ಪಡಿಸಿದ್ದು, ಸಾಕ್ಷಿ ವಿಚಾರಣೆಗೆ ಆ ಪಂಚನಾಮೆಗಳು ಅವಶ್ಯಕವಾಗಿರುವ ಕಾರಣ ಆ ೩ ಮೂಲ ಪಂಚನಾಮೆಗಳನ್ನು ಈ ಪ್ರಕರಣಕ್ಕೆ ತೆಗೆದುಕೊಂಡು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿಯು ಆ ಪಂಚನಾಮೆಗಳನ್ನು ಮತ್ತು ಅವುಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.) ಆ ಪಂಚನಾಮೆಗಳ ದೃಢೀಕೃತ ಪ್ರತಿಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದು , ಅವುಗಳನ್ನು ಈಗಾಗಲೇ ನಿಪಿ-೧೪ ರಿಂದ ೧೬ ಎಂದು ಗುರುತಿಸಲಾಗಿದೆ.

ದಿನಾಂಕ ೧೭-೧೦-೨೦೧೭ ರಂದು ಸಂಜೆ ನಾನು ಮತ್ತು ಚಾಸಾ ೪ ರವರು ಜಾಂಬೋಟಿ ಗ್ರಾಮದ ಖಾನಾಪೂರ ಕ್ರಾಸನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಪೋಲಿಸರು ನಮ್ಮನ್ನು ಪಂಚನಾಮೆಗೆ ಬರುವಂತೆ ಕರೆದರು. ಆಗ ಪೋಲಿಸರ ವಶದಲ್ಲಿ ಮೂರು ಜನ ಆರೋಪಿತರು ಮತ್ತು ಒಂದು ವ್ಯಾಕ್ಸ ವ್ಯಾಗನ ಕಾರ ಮತ್ತು ಮಾರುತಿ ಸುಜುಕಿ ವ್ಯಾನ ಇದ್ದವು. ಪೋಲಿಸರು ವ್ಯಾಕ್ಸ ವ್ಯಾಗನ ಕಾರಿನ ಡಿಕ್ಕಿಯನ್ನು ಪರಿಶೀಲಿಸಿದರು. ಅಲ್ಲಿ ನಿಪಿ-೨೧ ರಲ್ಲಿ ಕಾಣುವ ವಸ್ತುಗಳು ಇದ್ದವು. ಪೋಲಿಸರು ಸ್ಥಳದಲ್ಲಿ ನಿಪಿ-೧೪ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ಪೋಲಿಸರು ಪಂಚನಾಮೆಯನ್ನು ಮಶೀನ್ ನಲ್ಲಿ ತಯಾರಿಸಿದರು. ನಂತರ ಪೋಲಿಸರು ಅವೆಲ್ಲವುಗಳನ್ನು ತಮ್ಮ

ವಶಕ್ಕೆ ಪಡೆದುಕೊಂಡರು. ಪೋಲಿಸರು ಸ್ಥಳದಲ್ಲಿ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-೧೭ ರಿಂದ ೨೧ ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ-೧೭ ಮತ್ತು ೧೮ ರಲ್ಲಿ ಕಾಣುವ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಪೋಲಿಸರು ಆರೋಪಿತರನ್ನು, ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮತ್ತು ವಾಹನಗಳನ್ನು ತೆಗೆದುಕೊಂಡು, ನಮ್ಮನ್ನು ಜಾಂಬೋಟಿ ಹೊರ ಉಪಠಾಣೆಗೆ ಕರೆದುಕೊಂಡು ಹೋದರು. ಉಪಠಾಣೆಯಲ್ಲಿ ೧ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಮುಂದಿನ ಸೀಟಿನ ಅಡಿಯಲ್ಲಿದ್ದ ಅನೇಕ ಆಭರಣಗಳನ್ನು ಹಾಜರು ಪಡಿಸಿದ. ನಿಖರವಾಗಿ ಆ ದಿನ ಒಟ್ಟು ಎಷ್ಟು ವಸ್ತುಗಳನ್ನು ಹಾಜರು ಪಡಿಸಿದ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸ್ಥಳದಲ್ಲಿ ನಿಪಿ-೧೫ ರಂತೆ ಪಂಚನಾಮೆ ತಯಾರಿಸಿ, ಫೋಟೊ ತೆಗೆದರು. ನಂತರ ಪೋಲಿಸರು ಅವುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಪೋಲಿಸರು ಸ್ಥಳದಲ್ಲಿ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ -೨೨ ಮತ್ತು ೨೩ ಎಂದು ಗುರುತಿಸಲಾಗಿದೆ. ಆ ದಿನ ಜಪ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

ಆ ದಿನ ಪೋಲಿಸರು ಎಷ್ಟು ಪಂಚನಾಮೆ ಮಾಡಿದ್ದರು ಎಂದು ನನಗೆ ನೆನಪಿಲ್ಲ. ಇಷ್ಟು ಸಂಗತಿಗಳನ್ನು ಬಿಟ್ಟು ನನಗೆ ಬೇರೇನೂ ನೆನಪಿಲ್ಲ. ನಿಪಿ-೨೪ ಮತ್ತು ೨೫ನ್ನು ಸಾಕ್ಷಿಯು ನೋಡಿ ಈ ಫೋಟೊಗಳನ್ನು ಪೋಲಿಸರು ಠಾಣೆಯಲ್ಲಿ ತೆಗೆದಿದ್ದರು ಎಂದು ನುಡಿದಿರುತ್ತಾರೆ. ಈ ಫೋಟೊಗಳನ್ನು ಕಾರುಗಳಲ್ಲಿ ಆಭರಣಗಳಿದ್ದ ಕಾರಣಕ್ಕಾಗಿ ತೆಗೆದಿದ್ದರು. ಇಷ್ಟು ಸಂಗತಿಗಳನ್ನು ಬಿಟ್ಟು ನನಗೆ ಬೇರೇನೂ ನೆನಪಿಲ್ಲ. ಆ ದಿನ ನೋಡಿದ ಆರೋಪಿತರನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ.

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

**ಪಾಟೀ ಸವಾಲು ಃ** ಸಸಅ ರವರಿಂದ

ಪೋಲಿಸರು ನನ್ನ ಸಮಕ್ಷಮ ಆರೋಪಿತರನ್ನು ವಿಚಾರಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿತರು ತಾವು ಹಲವಾರು ಸ್ಥಳಗಳಲ್ಲಿ ಸದರಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದಿದ್ದೆವು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಮಾರಾಟ ಮಾಡಲು ಬೆಳಗಾವಿಗೆ ಹೋಗುವಾಗ ಪೋಲಿಸರು ಬಂಧಿಸಿದರು ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ೧ ಮತ್ತು ೨ನೇ ಆರೋಪಿತರು ನಿಪಿ-೨೧ ರಲ್ಲಿ ಕಾಣುವ ವಸ್ತುಗಳನ್ನು ಬಳಸಿ ಮನೆಗಳಲ್ಲಿ ಕಳ್ಳತನ ಮಾಡಿದ್ದೆವು ಎಂದು

ನನ್ನ ಸಮಕ್ಷಮ ತಿಳಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಮೇಲೆ ಹೇಳಿದಂತೆ ತಿಳಿಸಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ದಿನ ೧ನೇ ಆರೋಪಿಯ ವಶದಿಂದ ನಿಪಿ-೧೬ ರಲ್ಲಿ ನಮೂದಿಸಿದ ಒಟ್ಟು ೪೨ ಆಭರಣಗಳನ್ನು ಪೋಲಿಸರು ಜಪ್ತುಪಡಿಸಿಕೊಂಡರು ಎಂದರೆ ಎಷ್ಟು ಆಭರಣಗಳು ಇದ್ದವು ಎಂದು ನನಗೆ ನೆನಪಿಲ್ಲ. ಆಗ ಪೋಲಿಸರು ಒಬ್ಬ ಅಕ್ಕಸಾಲಿಗನನ್ನು ಕರೆಸಿ ಆಭರಣಗಳನ್ನು ತೂಕ ಮಾಡಿಸಿದರು ಎಂದರೆ ನಿಜ. ಆಗ ಪೋಲಿಸರು ವಿಡಿಯೋವನ್ನು ಸಹ ತೆಗೆಸಿದ್ದರು ಎಂದರೆ ನಿಜ. ನಿಪಿ-೧೧ ಮತ್ತು ೧೨ ರಲ್ಲಿ ಕಾಣಿಸುವ ಬಂಗಾರದ ಮೂರು ಉಂಗುರಗಳು, ಎರಡು ಜೊತೆ ಕಿವಿಯೋಲೆ, ಬೆಳ್ಳಿಯ ವಾಟಿಗೆ, ಲಕ್ಷ್ಮಿ ಮೂರ್ತಿ ಮತ್ತು ಚಮಚವನ್ನು ಪೋಲಿಸರು ಆ ದಿನ ೧ನೇ ಆರೋಪಿಯ ವಶದಿಂದ ಜಪ್ತು ಪಡಿಸಿಕೊಂಡಿದ್ದರು ಎಂದರೆ ನನಗೆ ಹೇಳಲು ಆಗುವುದಿಲ್ಲ.

ಆ ದಿನ ಉಪಠಾಣೆಯಲ್ಲಿ ೨ನೇ ಆರೋಪಿಯು ನನ್ನ ಸಮಕ್ಷಮ ವ್ಯಾಕ್ಸ ವ್ಯಾಗನ ಕಾರಿನ ಹಿಂದಿನ ಸೀಟಿನ ಅಡಿಯಲ್ಲಿದ್ದ ೪೦ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ತೆಗೆದು ಹಾಜರು ಪಡಿಸಿದನು ಎಂದರೆ ನಿಜ. ಆದರೆ ಎಷ್ಟು ಆಭರಣಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಆಗ ಪೋಲಿಸರು ಅಕ್ಕಸಾಲಿಗನಿಂದ ಸದರಿ ಆಭರಣಗಳನ್ನು ತೂಕ ಮಾಡಿಸಿದರು ಎಂದರೆ ನಿಜ. ಆಗ ಪೋಲಿಸರು ವಿಡಿಯೋವನ್ನು ಸಹ ತೆಗೆಸಿದ್ದರು ಎಂದರೆ ನಿಜ. ಪೋಲಿಸರು ಸ್ಥಳದಲ್ಲಿ ನಿಪಿ-೧೬ ರಂತೆ ಪಂಚನಾಮೆ ತಯಾರಿಸಿ, ನಿಪಿ-೨೪ ಮತ್ತು ೨೫ ರಂತೆ ಫೋಟೊಗಳನ್ನು ತೆಗೆದರು ಮತ್ತು ಆ ವಸ್ತುಗಳನ್ನು ಜಪ್ತುಪಡಿಸಿಕೊಂಡರು ಎಂದರೆ ನಿಜ. ನಿಪಿ-೧೧ ಮತ್ತು ೧೨ ರಲ್ಲಿ ಕಾಣಿಸುವ ಬಂಗಾರದ ಎರಡು ಚೈನಗಳು, ಬ್ರಾಸಲೇಟ ಮತ್ತು ಬೆಳ್ಳಿಯ ಚೆರಿಗೆಯನ್ನು ಪೋಲಿಸರು ಆ ದಿನ ೨ನೇ ಆರೋಪಿಯ ವಶದಿಂದ ಜಪ್ತು ಪಡಿಸಿಕೊಂಡಿದ್ದರು ಎಂದರೆ ನನಗೆ ಹೇಳಲು ಆಗುವುದಿಲ್ಲ.

ಪೋಲಿಸರು ನನ್ನ ಸಮಕ್ಷಮ ಆರೋಪಿತರನ್ನು ವಿಚಾರಿಸಿದ್ದರೂ ಸಹ ನಾನು ಈಗ ವಿಚಾರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೧ ಮತ್ತು ೨ನೇ ಆರೋಪಿತರಿಂಂದ ಆ ದಿನ ಜಪ್ತು ಪಡಿಸಿಕೊಂಡ ವಸ್ತುಗಳಲ್ಲಿ ನಿಪಿ-೧೧ ಮತ್ತು ೧೨ ರಲ್ಲಿ ಕಾಣುವ ಆಭರಣಗಳು ಸಹ ಇದ್ದು, ನಾನು ಅವುಗಳನ್ನು ನೋಡಿದ್ದರೂ ಸಹ ಈಗ ಈ ವಿಷಯ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಸದರಿ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದರೂ ಸಹ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎ ಡಿ ಎಲ ವಕೀಲರಿಂದ

ನನಗೆ ಕನ್ನಡ ಓದಲು, ಬರೆಯಲು ಮತ್ತು ಸರಿಯಾಗಿ ಮಾತನಾಡಲು ಬರುವುದಿಲ್ಲ. ನಾನು ಮತ್ತು ಚಾಸಾ **೪** ರವರು ಪಂಚನಾಮೆಯನ್ನು ಇದೇ ರೀತಿ ಬರೆಯುವಂತೆ ಪೋಲಿಸರಿಗೆ ಮಾಹಿತಿ ಕೊಟ್ಟಿಲ್ಲ. ಪಂಚನಾಮೆಯನ್ನು ಯಾರು ತಯಾರಿಸಿದರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಪಂಚನಾಮೆ ತಯಾರಿಸಿ ಇಟ್ಟಿದ್ದರು. ನಾನು ಮತ್ತು ಚಾಸಾ **೪** ಅದಕ್ಕೆ ಸಹಿ ಮಾಡಿದೆವು. ಆ ದಿನ ಪಂಚನಾಮೆಗಳಿಗೆ ನಾನು ಮತ್ತು ಚಾಸಾ **೪** ಮಾತ್ರ ಸಹಿ ಮಾಡಿದ್ದೆವು. ನಮ್ಮನ್ನು ಹೊರತು ಪಡಿಸಿ ಬೇರೆ ಯಾರೂ ಸಹಿ ಮಾಡಿರಲಿಲ್ಲ. ಆ ದಿನ ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ತಡೆ ಹಿಡಿದು ತಪಾಸಣೆ ಮಾಡಲಿಲ್ಲ. ಆ ದಿನ ನೋಡಿದ ವಾಹನಗಳ ಸಂಖ್ಯೆಗಳನ್ನು ಹೇಳಲು ಆಗುವುದಿಲ್ಲ. ನಿಪಿ-**೧೪** ರಿಂದ **೧೬**ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ. ಆ ಎಲ್ಲ ಸಹಿಗಳನ್ನು ಒಂದೇ ದಿನ ಮಾಡಿದ್ದೇನೆ. ಆ ದಿನ ಆರೋಪಿತರಿಂದ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಆ ದಿನ ಪೋಲಿಸರು ಫೋಟೊಗಳನ್ನು ಏಕೆ ತೆಗೆದರು ಎಂದು ಗೊತ್ತಿಲ್ಲ. ಆ ದಿನ ನಾನು ಯಾವುದೇ ಚೀಟಿಗಳ ಮೇಲೆ ಸಹಿ ಮಾಡಿರಲಿಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ-**೧೪** ರಿಂದ **೧೬** ರಂತೆ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ, ಯಾವುದೇ ವಸ್ತುಗಳನ್ನು ಮತ್ತು ವಾಹನಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಆಭರಣಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ಇದ್ದ ಅಕ್ಕಸಾಲಿಗನ ಹೆಸರು ನನಗೆ ಗೊತ್ತಿಲ್ಲ. ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುವನ್ನು ನೋಡಿದಾಗ ಇದು ಬಂಗಾರ ಅಥವಾ ಬೆಳ್ಳಿ ಎಂದು ಹೇಳಲು ಯಾವುದೇ ವಿಶೇಷ ತರಬೇತಿಯನ್ನು ಪಡೆದಿಲ್ಲ. ಪೋಲಿಸರು ನಿಪಿ-**೧೭** ರಿಂದ **೨೫** ರಂತೆ ಫೋಟೊಗಳನ್ನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-**೨೧** ರಲ್ಲಿ ಕಾಣುವ ವಸ್ತುಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ. ಆ ದಿನ ಇವೇ ವಸ್ತುಗಳನ್ನು ಜಪ್ತು ಪಡಿಸಿಕೊಂಡರು ಎಂದು ಹೇಳಲು ಇವುಗಳ ಮೇಲೆ ಯಾವುದೇ ವಿಶೇಷ ಗುರುತುಗಳು ಇಲ್ಲ ಎಂದರೆ ನಿಜ. ಆ ವಸ್ತುಗಳಿಗೂ, ಬಂಗಾರದ ಆಭರಣಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನಿಪಿ-**೧೭** ರಿಂದ **೨೫** ಫೋಟೊಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತೆಗೆಸಿಕೊಂಡು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು

ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. (ಸಿ.ಸಿ. **೧೭೨೮/೨೦೧೭** ರಿಂದ ಪಡೆದು **೩** ಮೂಲ ಪಂಚನಾಮೆಗಳನ್ನು ಆ ಪ್ರಕರಣಕ್ಕೆ ಹಿಂದಿರುಗಿಸಲಾಯಿತು.)

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ**
**ಸಿ.ಸಿ.ನಂ.೯೮/೨೦೧೮**

**ಪಿಡಬ್ಲು ೨**
**ಸಿಡಬ್ಲು ೧**

ಹೆಸರು : ವಿಜಯಕುಮಾರ ವೀರಭದ್ರಪ್ಪ ಬಡಿಗೇರ
ವಯಸ್ಸು : ೬೬ ವರ್ಷ
ಉದ್ಯೋಗ : ನಿವೃತ್ತ ಪ್ರಾಚಾರ್ಯರು
ವಾಸ : ಇಟಗಿ ಗ್ರಾಮ, ಖಾನಾಪೂರ ತಾಲೂಕು.

**ದಿನಾಂಕ ೧೬-೦೫-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ ೧೨ ನನ್ನ ಮಗ, ಚಾಸಾ ೧೩ ನನ್ನ ಹೆಂಡತಿ. ದಿನಾಂಕ ೧೫-೦೫-೨೦೧೭ ರಂದು ಬೆಳಿಗ್ಗೆ ೯.೩೦ ಕ್ಕೆ ಬೆಂಗಳೂರಿನಲ್ಲಿರುವ ನನ್ನ ಮಗನನ್ನು ಭೇಟಿ ಆಗಲು ನಾನು ಮತ್ತು ನನ್ನ ಹೆಂಡತಿ ನಮ್ಮ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದೆವು. ದಿನಾಂಕ ೨೪-೦೫-೨೦೧೭ ರಂದು ಬೆಳಿಗ್ಗೆ ೧೧.೧೫ ಕ್ಕೆ ನಾನು ಬೆಂಗಳೂರಿನಲ್ಲಿದ್ದಾಗ ರವಿ ವಿರುಪಾಕ್ಷಿ ಕಲಮಠ ಎಂಬುವವರು ನನಗೆ ಫೋನ ಮಾಡಿ ನಿಮ್ಮ ಮನೆಯ ಹಿತ್ತಲ ಬಾಗಿಲನ್ನು ಯಾರೋ ಮೀಟಿ ತೆಗೆದಿದ್ದಾರೆ ಎಂದು ನಿಮ್ಮ ಮನೆಯಲ್ಲಿ ಕೆಲಸ ಮಾಡುವ ಚಾಸಾ ೧೦ ರವರು ತಿಳಿಸಿದರು ಎಂದು ನನಗೆ ಫೋನನಲ್ಲಿ ತಿಳಿಸಿದರು. ತಕ್ಷಣ ನಾನು ಚಾಸಾ ೧೧ ರವರಿಗೆ ಫೊನ ಮಾಡಿ ಮನೆಯ ಬಳಿ ಹೋಗಿ ನೋಡಿ ಅಲ್ಲಿಯೇ ಇರುವಂತೆ ಆತನಿಗೆ ತಿಳಿಸಿದೆ. ನಾನು, ನನ್ನ ಹೆಂಡತಿ ಮತ್ತು ಮಗ ಕಾರನಲ್ಲಿ ಊರಿಗೆ ಬಂದೆವು. ಆಗ ರಾತ್ರಿ ೮.೦೦ ಗಂಟೆ ಆಗಿತ್ತು. ಆಗ ನಮ್ಮ ಮನೆಯ ಬಳಿ ಪೋಲಿಸರು ಸಹ ಬಂದಿದ್ದರು. ನಾನು ಮನೆಯನ್ನು ಪರಿಶೀಲಿಸಿದಾಗ ನನ್ನ ಮನೆಯ ಹಿತ್ತಲ ಬಾಗಿಲನ್ನು ಯಾವುದೋ ಆಯುಧದಿಂದ ಮೀಟಿ ಮುರಿದು ಒಳ ಪ್ರವೇಶಿಸಿರುವುದು ಕಂಡು ಬಂತು. ಎರಡನೇ ಮಹಡಿಯ ಬೆಡ ರೂಮಿನಲ್ಲಿದ್ದ ಟ್ರೇಜರಿ ಮತ್ತು ಕಪಾಟಿನಲ್ಲಿದ್ದ ಎಲ್ಲ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ಅವುಗಳನ್ನೂ ಸಹ ಯಾವುದೋ ಆಯುಧದಿಂದ ಮೀಟಿ ಮುರಿದು ಬಾಗಿಲು ತೆರೆದಿದ್ದರು.

ನಮ್ಮ ಮನೆಯ ಟ್ರೇಜರಿಯಲ್ಲಿದ್ದ ಬಂಗಾರದ ಒಂದು ಜೊತೆ ತೋಡೆ, ಅವಲಕ್ಕಿ ಸರ, ಮುರು ಉಂಗುರಗಳು, ಎರಡು ಚೈನಗಳು, ಒಂದು ಬ್ರಾಸಲೇಟ, ಮೂರು ಜೊತೆ ಕಿವಿಯೋಲೆಗಳು, ನಾಲ್ಕು ಸುತ್ತುಂಗುರಗಳು, ಒಂದು ಬಂಗಾರದ ಕಾಯಿನ, ಒಂದು ಬಂಗಾರದ ಮಂಗಳಸೂತ್ರ, ಬಂಗಾರದ ಕಡೆ, ಮತ್ತು ೧೦೦೦ ಗ್ರಾಂ ನ ಬೆಳ್ಳಿಯ ಗಟ್ಟಿ, ಬೆಳ್ಳಿಯ ತಟ್ಟೆ, ಒಂದು ಬೆಳ್ಳಿಯ ಲಕ್ಷ್ಮಿ ಮೂರ್ತಿ, ಒಂದು

ಬೆಳ್ಳಿಯ ಸಮೆ, ಒಯಿ ಬೆಳ್ಳಿಯ ಚೆರಿಗೆ, ಒಂದು ಆರತಿ ಸೆಟ, ಒಂದು ವಾಟೆ, ಒಂದು ಚಮಚ ಮತ್ತು ರೂ.೫೦೦೦/- ನಗದು ಹಣ ಕಳ್ಳತನ ಆಗಿತ್ತು.

ನಂತರ ನಾನು ಅಲ್ಲಿಯೇ ದೂರನ್ನು ಬರೆದು ಸ್ಥಳದಲ್ಲಿದ್ದ ಪೋಲಿಸರಿಗೆ ಕೊಟ್ಟೆನು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೧೦ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೧೦(ಎ) ಎಂದು ಗುರುತಿಸಲಾಯಿತು. ಮರುದಿನ ಪೋಲಿಸರು ಸ್ಥಳಕ್ಕೆ ಪಂಚನಾಮೆ ಮಾಡಲು ಬಂದಿದ್ದರು. ಆಗ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿದೆ. ಆಗ ಪೋಲಿಸರು ನಿಪಿ ೩ ರಿಂದ ೯ ರಂತೆ ಸ್ಥಳದಲ್ಲಿ ಫೋಟೋಗಳನ್ನು ತೆಗೆದರು.

ಐದು ತಿಂಗಳ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. **ಠಾಣೆಯಲ್ಲಿ ಆಗ ಸಾಕಷ್ಟು** ಆಭರಣಗಳು ಇದ್ದು ಪೋಲಿಸರು ಅವುಗಳಲ್ಲಿನ ನಮ್ಮ ಆಭರಣಗಳನ್ನು ಗುರುತಿಸಲು ಹೇಳಿದ್ದರಿಂದ ಅವುಗಳಲ್ಲಿದ್ದ, ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಆಭರಣಗಳನ್ನು ನೋಡಿ ಗುರುತಿಸಿದೆನು. ಅಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಮೂರು ಬಂಗಾರದ ಉಂಗುರ, ಬಂಗಾರದ ಎರಡು ಜೊತೆ ಕಿವಿಯೋಲೆ, ಬೆಳ್ಳಿಯ ವಾಟೆ, ಬೆಳ್ಳಿಯ ಲಕ್ಷ್ಮೀ ಮೂರ್ತಿ, ಚಮಚ, ಎರಡು ಬಂಗಾರದ ಚೈನಗಳು, ಒಂದು ಬ್ರಾಸಲೇಟ, ಬೆಳ್ಳಿಯ ಚೆರಿಗೆ ಮಾತ್ರ ಇದ್ದವು. ಆಗ ಠಾಣೆಯಲ್ಲಿ ಮೂರು ಜನ ಆರೋಪಿತರು ಇದ್ದರು. ಇವರೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದರು ಎಂದು ಪೋಲಿಸರು ತಿಳಿಸಿದರು.

ನಂತರ ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ನನ್ನ ಆಭರಣಗಳನ್ನು ಬಿಡಿಸಿಕೊಂಡೆ. ನನ್ನ ಆಭರಣಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಎರಡು ಫೋಟೋಗಳಲ್ಲಿನ ತನ್ನ ಆಭರಣಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ ೧೧ ಮತ್ತು ೧೨ ಎಂದು ಗುರುತಿಸಲಾಯಿತು. ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದ ಉಳಿದ ಆಭರಣಗಳನ್ನು ಆರೋಪಿತರು ಮಾರಾಟ ಮಾಡಿ ಆ ಹಣವನ್ನು ಖರ್ಚು ಮಾಡಿದ್ದಾರೆ ಎಂದು ಪೋಲಿಸರು ತಿಳಿಸಿದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮೂರು ಜನ ಆರೋಪಿತರನ್ನು ನೋಡಿ ಗುರುತಿಸಿ, ಆ ದಿನ ಠಾಣೆಯಲ್ಲಿ ನೋಡಿದ ಆರೋಪಿತರು ಇವರೇ ಎಂದು ನುಡಿದಿರುತ್ತಾರೆ. ಕಳ್ಳತನವಾಗಿದ್ದ ಮನೆ ನನ್ನ ಹೆಸರಿನಲ್ಲಿದೆ. ಆ ಮನೆಯ ಸಂಖ್ಯೆ ೬೧೨ ಇದೆ. ನಮ್ಮ ಮನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯವರು ನೀಡಿದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ ೧೩ ಎಂದು ಗುರುತಿಸಲಾಯಿತು.

ಪಾಟೀ ಸವಾಲು : ೨ನೇ ಆರೋಪಿ ಪರ ವಕೀಲರಿಂದ

ನಿಪಿ ೧೦ ರಲ್ಲಿ ನಾನು ನನ್ನ ಮನೆಯ ಸಂಖ್ಯೆಯನ್ನು ಬರೆದಿಲ್ಲ. ಅದನ್ನು ಬರೆಯಲು ನನಗೆ ತೊಂದರೆ ಇರಲಿಲ್ಲ ಎಂದರೆ ನಿಜ. ನಿಪಿ ೨ ಪಂಚನಾವೆಯನ್ನು ಬರೆಯಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ತಾವೇ ಬರೆದುಕೊಂಡರು. ಪೋಲಿಸರು ಸ್ಥಳದಲ್ಲಿ ಪಂಚನಾಮೆಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಯನ್ನು ಬರೆದುಕೊಳ್ಳಲಿಲ್ಲ. ನಿಪಿ ೩ ರಿಂದ ೯ ಫೋಟೋಗಳನ್ನು ತೆಗೆದ ವ್ಯಕ್ತಿಯ ಹೆಸರು ನನಗೆ ನೆನಪಿಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ ದಿನಾಂಕ ಮತ್ತು ಸಮಯವನ್ನು ಹೇಳಲು ಆಗುವುದಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನನ್ನ ಮನೆಯಲ್ಲಿ ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ವೈಯಕ್ತಿಯ ಮಾಹಿತಿ ಇಲ್ಲ.

ನಮ್ಮ ಮನೆಯಲ್ಲಿ ಯಾವುದೇ ವಸ್ತುಗಳ ಕಳ್ಳತನ ಆಗಿರಲಿಲ್ಲ, ಪೋಲಿಸರು ನನ್ನ ಮನೆಗೆ ಬಂದಿಲ್ಲ ಮತ್ತು ಅಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **ಠಾಣೆಯಲ್ಲಿ ನಾನು ಆರೋಪಿತರನ್ನು ನೋಡಿಲ್ಲ** ಪೋಲಿಸರು ಆ ದಿನ ಯಾವುದೇ ಆರೋಪಿತರನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ ೧೨ ರಲ್ಲಿ ಕಾಣುವ ಆಭರಣಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರು ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ**
**ಸಿ.ಸಿ.ನಂ.೯೮/೨೦೧೮**

**ಪಿಡಬ್ಲು ೧**
**ಸಿಡಬ್ಲು ೨**

ಹೆಸರು : ವೀರಪ್ಪ ಮಲ್ಲಪ್ಪ ತುರಮುರಿ
ವಯಸ್ಸು : ೬೪ ವರ್ಷ
ಉದ್ಯೋಗ : ವ್ಯವಸಾಯ
ವಾಸ : ಇಟಗಿ ಗ್ರಾಮ, ಖಾನಾಪೂರ ತಾಲೂಕು.

**ದಿನಾಂಕ ೧೯-೦೨-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ದಿನಾಂಕ ೨೫-೦೫-೨೦೧೭ ರಂದು ಚಾಸಾ ೧ ರವರ ಮನೆಗೆ ಪೋಲಿಸರು ಶ್ವಾನದಳದೊಂದಿಗೆ ಬಂದು ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯನ್ನು ಗುರುತಿಸಲು ತಮ್ಮ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. ಸದರಿ ಶ್ವಾನದಳದ ಪಂಚನಾಮೆಯನ್ನು ನಿಪಿ ೧ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ ೧ ರವರ ಮನೆಯ ಹಿತ್ತಿಲಿನ ಬಾಗಿಲು ಮುರಿದು ಕಳ್ಳತನ ಆಗಿದ್ದ ಕಾರಣ ಪೋಲಿಸರು ಅಲ್ಲಿ ಸ್ಥಳ ಪಂಚನಾಮೆಯನ್ನು ಬರೆದರು. ಆ ಮನೆಯ ಒಂದನೇ ಮಹಡಿಯಲ್ಲಿ ಇದ್ದ ಟ್ರೇಜರಿಯಲ್ಲಿದ್ದ ಎಲ್ಲ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ಅವುಗಳಲ್ಲಿದ್ದ ವಸ್ತುಗಳು ಕಳ್ಳತನ ಆಗಿದ್ದವು ಎಂದು ಚಾಸಾ ೧ ರವರು ಹೇಳಿದರು. ಪಂಚನಾಮೆ ಬರೆದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೆ. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೨ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೨(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲಿಸರು ಫೋಟೊ ತೆಗೆದರು. ಸಾಕ್ಷಿಯು ಆ ಫೋಟೋಗಳನ್ನು ನೋಡಿ ಗುರುತಿಸಿದ್ದು, ೭ ಫೋಟೋಗಳನ್ನು ನಿಪಿ ೩ ರಿಂದ ೯ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಚಾಸಾ ೩ ರವರು ಸಹ ಹಾಜರಿದ್ದು ಸಹಿ ಮಾಡಿದ್ದರು.

ಪಾಟೀ ಸವಾಲು : ೨ ನೇ ಆರೋಪಿ ಪರ ವಕೀಲರಿಂದ

ಇಟಗಿ ಗ್ರಾಮದಲ್ಲಿ ನನ್ನನ್ನು ಮತ್ತು ಚಾಸಾ ೩ ರವರನ್ನು ಗೌರವಸ್ಥ ವ್ಯಕ್ತಿಯಂತೆ ಕಾಣುತ್ತಾರೆ ಎಂದರೆ ನಿಜ. ಚಾಸಾ ೧ ಮತ್ತು ೩ ರವರು ನನ್ನ ಊರಿನವರು ಮತ್ತು ಸ್ನೇಹಿತರು ಎಂದರೆ ನಿಜ. ಪೋಲಿಸರು ಬಂದಿದ್ದ ಆ ಮನೆಯ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಇಟಗಿ ಗ್ರಾಮದಲ್ಲಿ ಸುಮಾರು

೪ ಸಾವಿರ ಮನೆಗಳು ಇರಬಹುದು. ನಿಪಿ ೨ ನ್ನು ಪೋಲಿಸರು ಬರೆದರು. ಅವರ ಹೆಸರು ನನಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ಬೇರೆ ಊರಿನ ವ್ಯಕ್ತಿಗಳು ಬಂದಾಗ ನಾಯಿಗಳು ಬಹಳಷ್ಟು ಬೊಗಳುತ್ತವೆ ಎಂದರೆ ನಿಜ. ಹೊಸಬರನ್ನು ನೋಡಿದಾಗ ಊರಿನವರು ಅವರನ್ನು ವಿಚಾರಿಸುತ್ತಾರೆ ಎಂದರೆ ನಿಜ. ನನ್ನ ಸಮಕ್ಷಮ ಪೋಲಿಸರು ನಿಪಿ ೨ ರಂತೆ ಪಂಚನಾಮೆ ಮಾಡಿಲ್ಲ, ನಿಪಿ ೨ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಚಾಸಾ ೧ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ ೩ ರಿಂದ ೯ನ್ನು ಸ್ಥಳದಲ್ಲಿ ತೆಗೆದಿಲ್ಲ, ಅವುಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ೧ನೇ ಆರೋಪಿ ಪರ ವಕೀಲರಿಂದ</u>

ಪೋಲಿಸರು ನಿಪಿ ೨ ನ್ನು ಬರೆದ ನಂತರ ನಾನು ಸಹಿ ಮಾಡಿದ್ದೆ. ನಿಪಿ ೨ ರಲ್ಲಿ ಸ್ಥಳದ ಚೆಕ್ಕುಬಂದಿಯನ್ನು ಬರೆಸಿದ್ದೇವೆ. ಈ ಪಂಚನಾಮೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನಾವು ಹೇಳಿದಂತೆ ಪಂಚನಾಮೆ ಬರೆದಿದ್ದಾರೆ. ನಾನು ಪಂಚನಾಮೆ ಕಾಲಕ್ಕೆ ಇಲ್ಲದಿದ್ದರೂ ಸಹ ಚಾಸಾ ೧ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಚಾಸಾ ೧ ರವರ ಮನೆಯಲ್ಲಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ೩ನೇ ಆರೋಪಿ ಪರ ವಕೀಲರಿಂದ</u>

ಚಾಸಾ ೧ ರವರು ನನ್ನ ಪ್ರಾಂಶುಪಾಲರಿದ್ದರು ಎಂದರೆ ನಿಜ. ನಾನು ಆ ಶಾಲೆಯ ಚೇರಮನ್ ಇದ್ದೇನೆ ಎಂದರೆ ನಿಜ. ಚಾಸಾ ೩ ಜಿಲ್ಲಾ ಪಂಚಾಯಿತಿಯ ಮಾಜಿ ಸದಸ್ಯರು ಎಂದರೆ ನಿಜ. ನಾನು ಚಾಸಾ ೧ ರವರಿಗೆ ಸಹಾಯ ಮಾಡುತ್ತೇನೆ ಎಂದರೆ ನಿಜ. ಈ ದಿನ ಆತನಿಗೆ ಸಹಾಯ ಮಾಡಲು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೋಲಿಸರು ನನ್ನನ್ನು ನಿಲ್ಲಿಸಿ ೬ ಫೋಟೊಗಳನ್ನು ತೆಗೆದಿದ್ದರು. ಚಾಸಾ ೧ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.